**All India Radio: Bangalore**
**National Bulletins In Kannada**
**12.08.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದೂರವಾಣಿ ಸಂಭಾಷಣೆ

೨. ಭಾರತದಲ್ಲಿ ಸುಮಾರು ೩೦೨ ದಶಲಕ್ಷ ಜನರು ಬಡತನದಿಂದ ಹೊರಕ್ಕೆ: ಸಂಶೋಧನಾ ವರದಿಯಿಂದ ಬಹಿರಂಗ

೩. ವಿಶ್ವದ ಮೂರನೇ ಅತಿದೊಡ್ಡ ಆಟೋಮೊಬೈಲ್ ಉದ್ಯಮವಾಗಿ ಹೊರಹೊಮ್ಮಿದ ಭಾರತ

೪. ಇಪ್ಪತ್ತೆರಡು ವರ್ಷದೊಳಗಿನ ಬಾಕ್ಸಿಂಗ್ ಚಾಂಪಿಯನ್‌ಶಿಪ್: ಮಹಿಳೆಯರ ೮೦ ಕೆಜಿ ವಿಭಾಗದಲ್ಲಿ ಭಾರತದ ರಿತಿಕಾಗೆ ಚಿನ್ನ

***><><><><><><><><***

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು. ಇತ್ತೀಚಿನ ಬೆಳವಣಿಗೆಗಳ ಕುರಿತು ಉಭಯ ನಾಯಕರು ಪರಸ್ಪರ ಚರ್ಚೆ ನಡೆಸಿದರು. ಸಂಘರ್ಷದ ಆರಂಭಿಕ ಮತ್ತು ಶಾಂತಿಯುತ ಪರಿಹಾರದ ಅಗತ್ಯತೆಯ ಕುರಿತು ಭಾರತದ ಸ್ಥಿರ ನಿಲುವನ್ನು ತಿಳಿಸಿರುವುದಾಗಿ ಪ್ರಧಾನಿ ಮೋದಿ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಭಾರತವು ಸಾಧ್ಯವಿರುವ ಎಲ್ಲ ಕೊಡುಗೆಗಳನ್ನು ನೀಡಲು ಮತ್ತು ಉಕ್ರೇನ್‌ನೊಂದಿಗಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಬದ್ಧವಾಗಿದೆ ಎಂದು ಅವರು ಹೇಳಿದರು.

***><><><><><><><><***

ಇದೇ ತಿಂಗಳ ಆಗಸ್ಟ್ ೨೫ ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ದೇಶದ ಮೊದಲ 'ಪಿಎಂ ಮಿತ್ರ ಪಾರ್ಕ್'ಗೆ ಭೂಮಿಪೂಜೆ ನೆರವೇರಿಸಲಿದ್ದಾರೆ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದ್ದಾರೆ. ಪ್ರಧಾನಿ ಮೋದಿ ಧಾರ್ ಭೇಟಿ ಹಿನ್ನೆಲೆಯಲ್ಲಿ ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಧಾರ್‌ನಲ್ಲಿ ಸ್ಥಾಪಿಸಲಾಗುವ ಪಿಎಂ ಮೆಗಾ ಇಂಟಿಗ್ರೇಟೆಡ್ ಜವಳಿ ಪ್ರದೇಶ ಮತ್ತು ಉಡುಪು ಪಾರ್ಕ್, ಭಾರತವನ್ನು ಜಾಗತಿಕ ಜವಳಿ ಶಕ್ತಿ ಕೇಂದ್ರವನ್ನಾಗಿ ಮಾಡುವಲ್ಲಿ ಪ್ರಮುಖ ಹೆಜ್ಜೆಯಾಗಲಿದೆ ಎಂದರು. ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹೂಡಿಕೆಯೊಂದಿಗೆ ೨ ಸಾವಿರದ ೧೫೮ ಎಕರೆಗಳಿಗೂ ಹೆಚ್ಚು ಪ್ರದೇಶದಲ್ಲಿ ವ್ಯಾಪಿಸಿರುವ ಇದು, ಅತ್ಯಾಧುನಿಕ ಮೂಲಸೌಕರ್ಯ, ಸುಸ್ಥಿರ ಅಭಿವೃದ್ಧಿ ಮತ್ತು ಕಾರ್ಯತಂತ್ರದ ನೀತಿ ಬೆಂಬಲದ ಮೂಲಕ ಜವಳಿ ಕೇಂದ್ರವಾಗುವ ಗುರಿಯನ್ನು ಹೊಂದಿದೆ ಎಂದು ಮೋಹನ್ ಯಾದವ್ ಹೇಳಿದರು.

*><><><><><><><*

೨೦೧೧-೧೨ ಮತ್ತು ೨೦೨೨-೨೩ರ ನಡುವೆ ಮನೆಗಳಲ್ಲಿ ಸಂಪನ್ಮೂಲಗಳ ಸಮಾನ ಹಂಚಿಕೆಯನ್ನು ಗಮನಿಸಿದಾಗ ಭಾರತದಲ್ಲಿ ಸುಮಾರು ೩೦೨ ದಶಲಕ್ಷ ಜನರು ಬಡತನದಿಂದ ಹೊರಬಂದಿದ್ದಾರೆ. ೨೦೧೧-೧೨ ರಿಂದ ೨೦೨೩-೨೪ರವರೆಗೆ ಭಾರತದಲ್ಲಿ ಮಹಿಳೆಯರು, ಪುರುಷರು ಮತ್ತು ಮಕ್ಕಳ ಸಂಪನ್ಮೂಲಗಳ ಆಂತರಿಕ ಹಂಚಿಕೆ ಮತ್ತು ಬಡತನ ದರಗಳಲ್ಲಿನ ಬದಲಾವಣೆಗಳು ಎಂಬ ಶೀರ್ಷಿಕೆಯ ಸಂಶೋಧನೆಯಲ್ಲಿ ಇದು ಕಂಡುಬಂದಿದೆ. ಡಾ. ಶಮಿಕಾ ರವಿ ಮತ್ತು ಡಾ. ಮುದಿತ್ ಕಪೂರ್ ಈ ಸಂಶೋಧನೆಯನ್ನು ನಡೆಸಿದ್ದಾರೆ. ಮನೆಯ ಸಂಪನ್ಮೂಲಗಳ ಸಮಾನ ಹಂಚಿಕೆಯನ್ನು ಗಮನಿಸಿದಾಗ, ರಾಷ್ಟ್ರೀಯ ಬಡತನ ದರಗಳು ೨೦೧೧-೧೨ರಲ್ಲಿ ೨೯.೫ ಪ್ರತಿಶತದಿಂದ ೨೦೨೨-೨೩ರಲ್ಲಿ ನಾಲ್ಕು ಪ್ರತಿಶತಕ್ಕೆ ಇಳಿದಿವೆ. ಆದರೂ, ಅಸಮಾನ ಹಂಚಿಕೆಯನ್ನು ಗಮನಿಸಿದಾಗ, ೨೦೧೧-೧೨ರಲ್ಲಿ ಬಡತನದ ದರವು ೩೪.೮ ಪ್ರತಿಶತದಷ್ಟು ಹೆಚ್ಚಾಗಿತ್ತು. ಇದು ೨೦೨೩-೨೪ರಲ್ಲಿ ೧೦.೫ ಪ್ರತಿಶತಕ್ಕೆ ಇಳಿದಿದೆ.

ಬಡತನದ ತೀವ್ರತೆಯನ್ನು ಅಳೆಯುವ ಬಡತನದ ಅಂತರವು ೨೦೧೧-೧೨ರಲ್ಲಿ ಶೇಕಡ ೧೮.೪ ರಿಂದ ೨೦೨೩-೨೪ರಲ್ಲಿ ಸಂಪನ್ಮೂಲಗಳನ್ನು ಸಮಾನವಾಗಿ ಹಂಚಿಕೊಂಡಾಗ ಶೇಕಡ ೧೦.೨ ಕ್ಕೆ ಗಣನೀಯ ಇಳಿಕೆಯಾಗಿದೆ ಎಂದು ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

*><><><><><><><*

ಭಾರತವು ವಿಶ್ವದ ಮೂರನೇ ಅತಿದೊಡ್ಡ ಆಟೋಮೊಬೈಲ್ ಉದ್ಯಮವಾಗಿ ಹೊರಹೊಮ್ಮಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ನವದೆಹಲಿಯಲ್ಲಿ ವಿಶ್ವ ಜೈವಿಕ ಇಂಧನ ದಿನದಂದು ಹಸಿರು ಕ್ರಾಂತಿ -೨೦೨೫ ಉದ್ದೇಶಿಸಿ ಮಾತನಾಡಿದ ಸಚಿವರು, ಪ್ರಸ್ತುತ ಅಮೆರಿಕದ ಆಟೋಮೊಬೈಲ್ ಉದ್ಯಮದ ಗಾತ್ರ ೭೮ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಚೀನಾ ೪೭ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಭಾರತ ೨೨ ಲಕ್ಷ ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಆಟೋಮೊಬೈಲ್ ಉದ್ಯಮವು ಇಲ್ಲಿಯವರೆಗೆ ನಾಲ್ಕು ಕೋಟಿ ೫೦ ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ ಎಂದು ಅವರು ಮಾಹಿತಿ ನೀಡಿದರು. ಭಾರತದ ಭವಿಷ್ಯದ ಇಂಧನ ವಲಯಕ್ಕೆ ಹಸಿರು ಹೈಡ್ರೋಜನ್‌ನ ಮಹತ್ವವನ್ನು ಒತ್ತಿ ಹೇಳಿದ ಸಚಿವರು, ೨೦೨೪ ರಲ್ಲಿ ದೇಶದ ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಶೇಕಡಾ ೧೫ ರಷ್ಟು ತಲುಪಿದೆ. ಇದು ೨೦೨೫-೨೦೨೬ ರ ವೇಳೆಗೆ ಎಥೆನಾಲ್ ೨೦ ಗುರಿಯತ್ತ ಒಂದು ಹೆಜ್ಜೆಯಾಗಿದೆ ಎಂದು ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

*><><><><><><><*

ಕಳೆದ ಹತ್ತು ವರ್ಷಗಳಲ್ಲಿ ಭಾರತದ ಮೀನು ರಫ್ತು ಗಮನಾರ್ಹವಾಗಿ ಏರಿಕೆಯಾಗಿದ್ದು, ೩೦ ಸಾವಿರ ಕೋಟಿ ರೂಪಾಯಿಗಳಿಂದ ೬೦ ಸಾವಿರ ಕೋಟಿ ರೂಪಾಯಿಗಳಿಗೆ ದ್ವಿಗುಣಗೊಂಡಿದೆ ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀನುಗಾರಿಕೆ ಸಚಿವಾಲಯವು ಹದಿನಾರನೇ ಹಣಕಾಸು ಆಯೋಗಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ಸಿದ್ಧಪಡಿಸುತ್ತಿರುವ ಹಿನ್ನೆಲೆಯಲ್ಲಿ ಸಚಿವಾಲಯವು, ರಫ್ತುದಾರರು ಮತ್ತು ರಾಜ್ಯ ಪ್ರತಿನಿಧಿಗಳನ್ನು, ವಿಶೇಷವಾಗಿ ಹೆಚ್ಚಿನ ರಫ್ತು ಸಾಮರ್ಥ್ಯ ಹೊಂದಿರುವ ರಾಜ್ಯಗಳಿಂದ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಆಹ್ವಾನಿಸಿದೆ ಎಂದು ತಿಳಿಸಿದರು.

*><><><><><><><><*

ಭೂಮಿಯ ಮೇಲಿನ ಅತ್ಯಂತ ಭವ್ಯ ಜೀವಿಗಳನ್ನು ರಕ್ಷಿಸುವ ಮತ್ತು ಸಂರಕ್ಷಿಸಲು ಪ್ರತಿ ವರ್ಷ ಆಗಸ್ಟ್ ೧೨ ರಂದು ವಿಶ್ವ ಆನೆ ದಿನವನ್ನು ಆಚರಿಸಲಾಗುತ್ತದೆ. ೨೦೨೫ ರ ವಿಶ್ವ ಆನೆ ದಿನದ ರಾಷ್ಟ್ರೀಯ ಆಚರಣೆಯನ್ನು ಇಂದು ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮವನ್ನು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ತಮಿಳುನಾಡು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಿದೆ. ಈ ಕಾರ್ಯಕ್ರಮವನ್ನು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಉದ್ಘಾಟಿಸಲಿದ್ದಾರೆ. ಈ ವೇಳೆ ಅರಣ್ಯಾಧಿಕಾರಿಗಳು, ನೀತಿ ನಿರೂಪಕರು, ವನ್ಯಜೀವಿ ತಜ್ಞರು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳೊಂದಿಗೆ ಅವರು ಆನೆ ಸಂರಕ್ಷಣೆ ಮತ್ತು ಮಾನವ-ಆನೆ ಸಂಘರ್ಷವನ್ನು ಪರಿಹರಿಸುವ ಮಾರ್ಗಗಳ ಕುರಿತು ಚರ್ಚಿಸಲಿದ್ದಾರೆ. ಆನೆಗಳು ಸಾಮಾನ್ಯವಾಗಿ ಬುದ್ಧಿವಂತಿಕೆ, ಶಕ್ತಿ ಮತ್ತು ಸಮತೋಲನದ ಸೂಚಕಗಳಾಗಿವೆ. ವಿಶ್ವದ ಕಾಡು ಆನೆ ಜನಸಂಖ್ಯೆಯಲ್ಲಿ ಸುಮಾರು ಶೇಖಡ ೬೦ರಷ್ಟು ಕಾಡು ಆನೆಗಳಿಗೆ ಭಾರತ ನೆಲೆಯಾಗಿದೆ. ೩೩ ಆನೆ ಮೀಸಲು ಪ್ರದೇಶಗಳು ಮತ್ತು ೧೫೦ ಗುರುತಿಸಲಾದ ಆನೆ ಕಾರಿಡಾರ್‌ಗಳನ್ನು ಭಾರತ ಹೊಂದಿದೆ.

*><><><><><><><><*

೧೮ನೇ ಅಂತಾರಾಷ್ಟ್ರೀಯ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರ ಒಲಿಂಪಿಯಾಡ್ ಇಂದು ಮುಂಬೈನಲ್ಲಿ ಆರಂಭವಾಗಲಿದೆ. ಈ ಕಾರ್ಯಕ್ರಮವನ್ನು ಮುಂಬೈನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ ಹೋಮಿ ಬಾಬಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್ ಆಯೋಜಿಸಿದೆ.

ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊಫೆಸರ್ ಅಜಯ್ ಕುಮಾರ್ ಸೂದ್, ಪರಮಾಣು ಇಂಧನ ಇಲಾಖೆಯ ಕಾರ್ಯದರ್ಶಿ ಡಾ. ಅಜಿತ್ ಕುಮಾರ್ ಮೊಹಂತಿ ಮತ್ತು ಅಂತಾರಾಷ್ಟ್ರೀಯ ಖಗೋಳ ಒಕ್ಕೂಟದ ಮಾಜಿ ಉಪಾಧ್ಯಕ್ಷ ಪ್ರೊಫೆಸರ್ ಅಜಿತ್ ಕೆಂಭಾವಿ ಉಪಸ್ಥಿತರಿರಲಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಹೋಮಿ ಬಾಬಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್‌ನ ಕೇಂದ್ರ ನಿರ್ದೇಶಕ ಪ್ರೊಫೆಸರ್ ಅನ್ರಾಬ್ ಭಟ್ಟಾಚಾರ್ಯ, ೧೦ ದಿನಗಳ ಈ ಕಾರ್ಯಕ್ರಮದಲ್ಲಿ ೬೪ ದೇಶಗಳಿಂದ ಒಟ್ಟು ೨೮೮ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

*><><><><><><><><*

೨೦೨೫ರ ಏಷ್ಯನ್ ೧೯ ವರ್ಷದೊಳಗಿನ ಮತ್ತು ೨೨ ವರ್ಷದೊಳಗಿನ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ಗಳಲ್ಲಿ ನಿನ್ನೆ ಮಹಿಳೆಯರ ೮೦ ಕೆಜಿ ವಿಭಾಗದಲ್ಲಿ ರಿತಿಕಾ ಚಿನ್ನ ಗೆಲ್ಲುವುದರೊಂದಿಗೆ ಭಾರತ ಉತ್ತಮ ಪ್ರದರ್ಶನ ನೀಡಿತು. ಬ್ಯಾಂಕಾಕ್‌ನಲ್ಲಿ ನಡೆದ ಈ ಕ್ರೀಡಾಕೂಟದಲ್ಲಿ ಭಾರತದ ತಂಡಗಳು ಎರಡೂ ವಯೋಮಾನದ ವಿಭಾಗಗಳಲ್ಲಿ ಒಟ್ಟು ೨೭ ಪದಕಗಳನ್ನು ಗೆದ್ದವು. ೧೯ ವರ್ಷದೊಳಗಿನವರ ತಂಡವು ಉತ್ತಮ ಪ್ರದರ್ಶನ ನೀಡಿತು. ೩ ಚಿನ್ನ, ೭ ಬೆಳ್ಳಿ ಮತ್ತು ೪ ಕಂಚು ಸೇರಿದಂತೆ ೧೪ ಪದಕಗಳೊಂದಿಗೆ ಒಟ್ಟಾರೆಯಾಗಿ ಎರಡನೇ ಸ್ಥಾನ ಗಳಿಸಿತು. ೨೨ ವರ್ಷದೊಳಗಿನವರ ತಂಡವು ೧ ಚಿನ್ನ, ೪ ಬೆಳ್ಳಿ ಮತ್ತು ೮ ಕಂಚು ಸೇರಿದಂತೆ ೧೩ ಪದಕಗಳನ್ನು ಗಳಿಸಿತು. ಈ ಗುಂಪಿನಲ್ಲಿ ರಿತಿಕಾ, ಏಕೈಕ ಚಿನ್ನದ ಪದಕ ವಿಜೇತರು. ಮಹಿಳೆಯರ ೫೭ ಕೆಜಿ ವಿಭಾಗದಲ್ಲಿ ಯಾತ್ರಿ ಪಟೇಲ್, ೬೦ ಕೆಜಿ ವಿಭಾಗದಲ್ಲಿ ಪ್ರಿಯಾ, ಪುರುಷರ ೭೫ ಕೆಜಿ ವಿಭಾಗದಲ್ಲಿ ನೀರಜ್ ಮತ್ತು ಇಶಾನ್ ಕಟಾರಿಯಾ ೯೦ ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕಗಳನ್ನು ಗೆದ್ದರು. ೧೯ ವರ್ಷದೊಳಗಿನವರ ತಂಡವು ಚಿನ್ನದ ಪದಕಗಳಲ್ಲಿ ಉಜ್ಬೇಕಿಸ್ತಾನ್‌ಗಿಂತ ಸ್ವಲ್ಪ ಹಿಂದಿದ್ದರೆ, ೨೨ ವರ್ಷದೊಳಗಿನವರ ತಂಡವು ನಾಲ್ಕನೇ ಸ್ಥಾನದಲ್ಲಿದೆ.

*><><><><><><><><*

ಚೀನಾದ ಚೆಂಗ್ಡುವಿನಲ್ಲಿ ಇಂದು ನಡೆಯಲಿರುವ ೨೦೨೫ ರ ವಿಶ್ವ ಕ್ರೀಡಾಕೂಟದ ಮಹಿಳೆಯರ ಸಾಂಡಾ ೫೨ ಕೆಜಿ ವುಶು ವಿಭಾಗದ ಫೈನಲ್‌ನಲ್ಲಿ ಭಾರತದ ನಮ್ರತಾ ಬಾತ್ರಾ ಅವರು ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಮೆಂಗ್ಯು ಚೆನ್ ವಿರುದ್ಧ ಸೆಣಸಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೫.೩೦ಕ್ಕೆ ಆರಂಭವಾಗಲಿದೆ.

*><><><><><><><><*